# ಮನುವಿಕಾಸ ವಾರ್ತಾಪತ್ರ

EdelGive Foundation
An Edelweiss Initiative

ಸಂಪುಟ - 1 ಸಂಚಿಕೆ - 6
ಜುಲೈ - ಸೆಪ್ಟೆಂಬರ್ 2019
ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಪಾದಕರು : ಶ್ರೀ ಗಣಪತಿ ಭಟ್ಟ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ತ್ರೈಮಾಸಿಕ ವಾರ್ತಾ ಪತ್ರ


## ಮುಂಬರುವ ಮೂರು ವರ್ಷಗಳಲ್ಲಿ 50 ದೊಡ್ಡ ಕೆರೆಗಳು & 150 ಕೃಷಿ ಹೊಂಡಗಳ ಅಭಿವೃದ್ಧಿ ಮನುವಿಕಾಸ ಸಂಸ್ಥೆಯೊಂದಿಗೆ ಅಜೀಮ್ ಪ್ರೇಮ್‌ಜಿ ಫಿಲಾಂತ್ರಫಿಕ್ ಇನಿಶಿಯೇಟಿವ್ ಸಂಸ್ಥೆ ಒಪ್ಪಂದ

ಮನುವಿಕಾಸ ಸಂಸ್ಥೆಯು ಕಳೆದ ಹತ್ತು ವರ್ಷಗಳಿಂದ ನೀರು ಸಂರಕ್ಷಣಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದನ್ನು ಗಮನಿಸಿದ ಅಜೀಮ್ ಪ್ರೇಮ್‌ಜಿ ಫಿಲಾಂತ್ರಫಿಕ್ ಇನಿಶಿಯೇಟಿವ್ ಸಂಸ್ಥೆಯವರು ಮನುವಿಕಾಸ ಸಂಸ್ಥೆಗೆ 50 ದೊಡ್ಡ ಕೆರೆಗಳು, 150 ಕೃಷಿ ಹೊಂಡಗಳು ಮತ್ತು 50 ನೀರಿಂಗಿಸುವ ಘಟಕಗಳನ್ನು ನಿರ್ಮಿಸಲು ಸುಮಾರು 2.17 ಕೋಟಿ ಹಣವನ್ನು ಮಂಜೂರಿ ಮಾಡಿದೆ. ಸಂಸ್ಥೆಯು ಕೇವಲ ಕೆರೆಗಳನ್ನು ಅಭಿವೃದ್ಧಿ ಮಾಡುವುದಷ್ಟೇ ಅಲ್ಲದೆ ನೀರು ಸಂರಕ್ಷಣೆ ಕಾರ್ಯಕ್ರಮದಲ್ಲಿ ಸ್ಥಳೀಯರ ಸಹಭಾಗಿತ್ವವನ್ನು ಹೆಚ್ಚಿಸಲು ಪ್ರಯತ್ನಿಸಲಿದೆ.

**ಮನುವಿಕಾಸ ಸಂಸ್ಥೆಯು ಇಲ್ಲಿಯವರೆಗೆ 22 ದೊಡ್ಡ ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ಮುಂಬರುವ ಮೂರು ವರ್ಷಗಳಲ್ಲಿ ಇನ್ನೂ 300 ಕೆರೆಗಳನ್ನು ಪುನರುಜ್ಜೀವನಗೊಳಿಸಲು ಮನುವಿಕಾಸ ಯೋಚಿಸಿದೆ. ಅನೇಕ ಸಂಸ್ಥೆಗಳು ಮನುವಿಕಾಸ ಸಂಸ್ಥೆಯೊಂದಿಗೆ ಕೈ ಜೋಡಿಸಲು ಮುಂದೆ ಬಂದಿವೆ. ಸಂಸ್ಥೆಯು ಇನ್ನೂ ವಿವಿಧ ಸಂಘ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ. ಸಂಸ್ಥೆ ಈವರೆಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಮುಂಡಗೋಡ ತಾಲೂಕಿನಲ್ಲಿ ಹೆಚ್ಚು ದೊಡ್ಡ ಕೆರೆಗಳನ್ನು ನಿರ್ಮಿಸಿದೆ. ಮುಂಬರುವ ದಿನಗಳಲ್ಲಿ ಸಂಸ್ಥೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕು, ಹಾವೇರಿ ಜಿಲ್ಲೆ, ಬೆಳಗಾವಿ ಜಿಲ್ಲೆಗಳಲ್ಲೂ ದೊಡ್ಡ ಕೆರೆಗಳನ್ನು ಅಭಿವೃದ್ಧಿಪಡಿಸುವ ಆಶಯ ಹೊಂದಿದೆ.**









# ಸಂಪಾದಕೀಯ....



ಗಣಪತಿ ಭಟ್ಟ

ಮಳೆಗಾಲದ ಆರಂಭದಲ್ಲಿ ಮಳೆಯ ಪ್ರಮಾಣ ಕಡಿಮೆ ಆದರೂ ಶಿರಸಿ, ಮುಂಡಗೋಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಉತ್ತಮ ಮಳೆಯಾಗಿದೆ. ಮನುವಿಕಾಸದಿಂದ ಅಭಿವೃದ್ಧಿಪಡಿಸಿದ ಎಲ್ಲ ಕೆರೆಗಳು ಮತ್ತು ಇಂಗುಗುಂಡಿಗಳು ತುಂಬಿ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಮನುವಿಕಾಸ ಸಂಸ್ಥೆಯ ಕೆಲಸ ಕಾರ್ಯಗಳನ್ನು ನೋಡಿ ಅನೇಕ ಸಂಘ ಸಂಸ್ಥೆಗಳು ನೀರು ಸಂರಕ್ಷಣೆ ಕೆಲಸಕ್ಕೆ ಹಣಕಾಸು ನೆರವು ನೀಡಲು ಮುಂದೆ ಬಂದಿವೆ. ಇತ್ತೀಚಿಗೆ ಮುಂಬೈ ಮೂಲದ ಸಿ. ಎಮ್. ಎಸ್. ಇನ್ಫೋ ಸಿಸ್ಟಮ್ ಲಿ., ನವರು ತಾವು 06 ಕೆರೆಗಳ ಅಭಿವೃದ್ಧಿಗೆ ಹಣಕಾಸು ನೆರವು ನೀಡುತ್ತೇವೆ ಎಂದು ಅವರೇ ನಮ್ಮ ಸಂಸ್ಥೆಯನ್ನು ಆಯ್ಕೆ ಮಾಡಿರುವುದು ಸಹಜವಾಗಿಯೇ ಸಂತಸ ಮೂಡಿಸಿದೆ.

ಈವರೆಗೆ ಸಂಸ್ಥೆ ಅಭಿವೃದ್ಧಿಪಡಿಸಿದ ಕೆರೆಗಳನ್ನು ಗಮನಿಸಿದ ಗ್ರಾಮಸ್ಥರು ಕೆರೆಗಳಿಂದಾದ ಉಪಯೋಗ ಗಮನಿಸಿ ಇನ್ನಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಲು ಸಂಸ್ಥೆಗೆ ಒತ್ತಾಯಿಸುತ್ತಿದ್ದಾರೆ.

ಮನುವಿಕಾಸ ಸಂಸ್ಥೆ ನೀರು ಸಂರಕ್ಷಣೆಗೆ ಮತ್ತು ಕೆರೆ ಅಭಿವೃದ್ಧಿಪಡಿಸುವಾಗ ರೈತರ ಸಹಭಾಗಿತ್ವವಿಲ್ಲದೆ ಆ ಕೆಲಸವನ್ನು ಕೈಗೆತ್ತಿಕೊಳ್ಳುವುದಿಲ್ಲ. ಎಲ್ಲಿ ರೈತರು ತಮ್ಮ ಬೇಡಿಕೆಯನ್ನು ಇಡುತ್ತಾರೆ ಅಲ್ಲಿ ಸಂಸ್ಥೆ Assessment ಮಾಡಿ ಕೆಲಸವನ್ನು ಕಾರ್ಯರೂಪಕ್ಕೆ ತರುತ್ತದೆ.

ಕೃಷಿ ಹೊಂಡಗಳ ನಿರ್ಮಾಣವಿರಲಿ ಅಥವಾ ದೊಡ್ಡ ಕೆರೆಗಳ ಸಂರಕ್ಷಣೆಯಿರಲಿ ಅರ್ಧದಷ್ಟು ವಂತಿಗೆ ರೈತರು ಕೊಡಲು ಸಿದ್ಧವಿದ್ದಲ್ಲಿ ಮನುವಿಕಾಸ ಸಂಸ್ಥೆ ಕೆಲಸ ಪ್ರಾರಂಭಿಸುತ್ತದೆ. ದಿನದಿಂದ ದಿನಕ್ಕೆ ರೈತರ ಬೇಡಿಕೆ ಹೆಚ್ಚುತ್ತಿದ್ದು ಕೆರೆಯ ಹೂಳನ್ನು ಸಾಗಿಸಲು ಒಬ್ಬೊಬ್ಬ ರೈತರು 50 ರಿಂದ 60 ಸಾವಿರ ಖರ್ಚು ಮಾಡುತ್ತಿರುವುದು ಕಂಡುಬಂದಿದೆ.

ಕೇವಲ ನೀರು ಸಂರಕ್ಷಣೆ ಕುರಿತು ಕಾರ್ಯಾಗಾರಗಳು, ತರಬೇತಿ ಮಾಡುವ ಬದಲು ನೇರವಾಗಿ ಸಂಸ್ಥೆ ಕೆರೆ ಅಭಿವೃದ್ಧಿಗೆ ಕೈ ಹಾಕಿ ರೈತರ ಸಹಭಾಗಿತ್ವ ಗಮನಿಸಿದೆ. ಶಿರಸಿ ತಾಲೂಕಿನಲ್ಲಷ್ಟೇ ಅಲ್ಲದೇ ಹಾನಗಲ್ ತಾಲೂಕು, ಸೊರಬ ತಾಲೂಕು ಮತ್ತು ಮುಂಡಗೋಡ ತಾಲೂಕುಗಳಲ್ಲಿಯೂ ಕೂಡ ಸಂಸ್ಥೆ ರೈತರ ಸಹಭಾಗಿತ್ವದಲ್ಲಿಯೇ ಕೆರೆಗಳನ್ನು ಅಭಿವೃದ್ಧಿಪಡಿಸಿದೆ. ಕೆರೆಗಳ ಅಭಿವೃದ್ಧಿಯೊಂದಿಗೆ ಸಂಸ್ಥೆ ಮಹಿಳೆಯರ ಕೌಶಲ ಅಭಿವೃದ್ಧಿ ಮತ್ತು ಜೀವನೋಪಾಯ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸುತ್ತಿದೆ. ಈಡಲ್ ಗೀವ್ ಫೌಂಡೇಶನ್ ನೊಂದಿಗೆ ಈಗಾಗಲೇ ಸಾವಿರಾರು ಮಹಿಳೆಯರಿಗೆ ಕೌಶಲ ತರಬೇತಿ ಮತ್ತು ಉದ್ಯಮಶೀಲತೆ ತರಬೇತಿ ನೀಡಲಾಗಿದ್ದು ಮುಂದಿನ ಒಂದು ವರ್ಷದಲ್ಲಿ 6000 ಮಹಿಳೆಯರನ್ನು ಉದ್ಯಮಶೀಲರನ್ನಾಗಿ ರೂಪಿಸಲು ಶ್ರಮಿಸುತ್ತಿದೆ.

ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆ ನೀಡಿ ಸಂಸ್ಥೆಯ ಕಾರ್ಯಕ್ರಮಗಳ ಅಭಿವೃದ್ಧಿಗೆ ಸಹಕರಿಸಲು ತಮ್ಮೆಲ್ಲರಲ್ಲಿ ಕಳಕಳಿಯ ಮನವಿ.









ಸ್ವಸಹಾಯದ ಸಂಘದ ಮಹಿಳೆಯರಿಗೆ ಹೊಲಿಗೆ ತರಬೇತಿ

# ಸ್ವ ಸಹಾಯ ಸಂಘಗಳೇ! ಹಣಕಾಸು ವ್ಯವಹಾರದಲ್ಲಿ ಇರಲಿ ಎಚ್ಚರ!



ಬಡ ಮಹಿಳೆಯರು ತಮ್ಮ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ತಮ್ಮ ಅಲ್ಪ ಆದಾಯದಲ್ಲಿ ಸ್ವಲ್ಪ ಹಣವನ್ನು ಉಳಿಸಿ ಸ್ವ ಸಹಾಯ ಸಂಘಗಳನ್ನು ರಚಿಸಿರುತ್ತಾರೆ. ಅನೇಕ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸರ್ಕಾರಿ ಇಲಾಖೆಗಳು ಸ್ವ ಸಹಾಯ ಸಂಘಗಳ ರಚನೆಯಲ್ಲಿ ಬಡ ಮಹಿಳೆಯರಿಗೆ ಸಹಾಯ ಸಹಕಾರ ನೀಡುತ್ತಿವೆ. ಸ್ವ ಸಹಾಯ ಸಂಘಗಳಿಗೆ ಸಾಲ ಸೌಲಭ್ಯ ನೀಡಲು ಅನೇಕ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಕೂಡ ಮುಂದೆ ಬಂದು ಸಾಲ ಒದಗಿಸುತ್ತಿವೆ. ಸಂಘದ ಪ್ರಾರಂಭದಲ್ಲಿ ಸಂಘಗಳು ತಾವೇ ಬ್ಯಾಂಕಿಗೆ ಹೋಗಿ ಹಣ ಜಮಾ ಮಾಡುವುದು, ಕಾಲ ಕಾಲಕ್ಕೆ ಬ್ಯಾಂಕ್ ಪಾಸ್ ಪುಸ್ತಕ ಎಂಟ್ರಿ ಮಾಡಿಸುವುದು ಮಾಡುತ್ತಾರೆ. ಹಣಕಾಸಿನ ವ್ಯವಹಾರ ಹೆಚ್ಚಾದಂತೆ ಸಂಘಗಳು ಹಣಕಾಸಿನ ವ್ಯವಹಾರದಲ್ಲಿ ಅಜಾಗರೂಕತೆ ಮಾಡಲು ಪಾರಂಭಿಸುತ್ತವೆ. ಹಣವನ್ನು ಜಮಾ ಮಾಡಲು ಸಂಘದ ಸದಸ್ಯರನ್ನು ಬಿಟ್ಟು ಬೇರೆಯವರಲ್ಲಿ ಕೊಡುವುದು, ವ್ಯವಹಾರವನ್ನು ಸರಿಯಾಗಿ ಬರೆದಿಡದಿರುವುದು ಇತ್ಯಾದಿ ಇದರಿಂದ ಸಂಘಗಳು ಬ್ಯಾಂಕ್ ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿ ಕೆಟ್ಟ ಹೆಸರು ಪಡೆಯಬೇಕಾಗುತ್ತದೆ.

**ಸ್ವ ಸಹಾಯ ಸಂಘಗಳು ಯಾವುದೇ ಸಂಘದ ಹಣವನ್ನು ಸಂಸ್ಥೆಗಳ ಸಿಬ್ಬಂದಿಗಳಿಗೆ ಅಥವಾ ಸಂಘದ ಅಧೀಕೃತ ಸದಸ್ಯರ ಹೊರತು ಬೇರೆಯವರಿಗೆ ಹಣ ಜಮಾ ಮಾಡಲು ಅವಕಾಶ ಕೊಡಬಾರದು. ಸ್ವತಃ ಸಂಘದ ಸದಸ್ಯರೆ ಹಣ ಜಮಾ ಮಾಡಿದ್ದರೂ ಪಾಸ್ ಬುಕ್ ಎಂಟ್ರಿ ಹಾಗೂ ರಶೀದಿಯನ್ನು ಪರಿಶೀಲಿಸಿ ಹಣ ಬ್ಯಾಂಕಿಗೆ ಅಥವಾ ಇತರ ಹಣಕಾಸು ಸಂಸ್ಥೆಗೆ ಜಮಾ ಆದ ಕುರಿತು ಖಾತ್ರಿ ಪಡಿಸಿಕೊಳ್ಳಬೇಕು.**

## ಸ್ವ ಸಹಾಯ ಸಂಘದಲ್ಲಿ ಹಣಕಾಸು ನಿರ್ವಹಣೆ :–

1. ಸಂಘದ ಪ್ರತಿಯೊಂದು ವ್ಯವಹಾರವನ್ನು ಠರಾವು ಪುಸ್ತಕದಲ್ಲಿ ಬರೆದಿಡಬೇಕು.
2. ಉಳಿತಾಯ ಮತ್ತು ಸಾಲ ಮರುಪಾವತಿ ಹಣವನ್ನು ಸಂಘದ ಸದಸ್ಯರೇ ಖುದ್ದಾಗಿ ಬ್ಯಾಂಕಿಗೆ ಹೋಗಿ ಜಮಾ ಮಾಡಿ ರಶೀದಿ ಪಡೆದು ರಶೀದಿಯನ್ನು ಕಾಯ್ದಿರಿಸಬೇಕು.
3. ಆಗಾಗ ಸಂಘದ ಪುಸ್ತಕಗಳನ್ನು ಸ್ವಯಂ ಸೇವಾ ಸಂಸ್ಥೆ ಮತ್ತು ಬ್ಯಾಂಕ್ ಅಧಿಕಾರಿಗಳಿಂದ ಪರಿಶೀಲನೆಗೆ ಒಳಪಡಿಸಬೇಕು.
4. ಸಂಘದ ಎಲ್ಲಾ ವ್ಯವಹಾರವನ್ನು ಎರಡು ಕಡೆ ಬರೆದಿಡಬೇಕು.
5. ಸಂಘದ ಸದಸ್ಯರು ತಮ್ಮ ಎಲ್ಲ ವ್ಯವಹಾರವನ್ನು ವೈಯಕ್ತಿಕ ಪಾಸ್ ಪುಸ್ತಕದಲ್ಲಿ ಬರೆಸಿ ಸಂಘದ ಮುಖ್ಯಸ್ಥರ ಸಹಿ ಪಡೆದಿರಬೇಕು.

## ಮನುವಿಕಾಸ ಮತ್ತು ಈಡಲ್ ಗೀವ್ ಫೌಂಡೇಶನ್ ಸಹಕಾರ- ಗ್ರಾಮೀಣ ಮಹಿಳೆಯರಿಗೆ ಉದ್ಯಮ ಶೀಲತೆಗೆ ಅವಕಾಶ

ಮನುವಿಕಾಸ ಸಂಸ್ಥೆಯು ಈಡಲ್ ಗೀವ್ ಸಹಕಾರದಲ್ಲಿ ಸ್ವ- ಸಹಾಯ ಸಂಘದ ಮಹಿಳಾ ಸದಸ್ಯರಿಗೆ ಉದ್ಯಮಶೀಲತೆ ಅವಕಾಶಗಳ ಕುರಿತು ತರಬೇತಿ ಹಮ್ಮಿಕೊಳ್ಳುತ್ತಿದೆ. ಜಿಲ್ಲಾದ್ಯಂತ ಉತ್ಸಾಹಿ ಸದಸ್ಯರಿಗೆ ಉದ್ಯಮಶೀಲತೆ ಅವಕಾಶಗಳ ಕುರಿತು ತರಬೇತಿಗಳು ನಡೆಯುತ್ತಿವೆ.

ತರಬೇತಿ ಪಡೆದ ಸದಸ್ಯರಿಗೆ ಬ್ಯಾಂಕ್ ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ ಒದಗಿಸಲು ಸಂಸ್ಥೆ ಸಹಕರಿಸುತ್ತದೆ.

## ಈಗಾಗಲೇ ಹಮ್ಮಿಕೊಂಡ ಉದ್ಯಮ ಶೀಲತಾ ತರಬೇತಿಗಳ ವಿವರ

| ಕ್ರ.ಸಂ. | ಸ್ಥಳ | ದಿನಾಂಕ | ಹಾಜರಾದ ಸದಸ್ಯರು |
|---|---|---|---|
| 1 | ದಾಂಡೇಲಿ | 01-12-2018 | 38 |
| 2 | ದಾಂಡೇಲಿ | 23-12-2018 | 27 |
| 3 | ಶಿರಸಿ | 20-01-2019 | 42 |
| 4 | ಕುಮಟಾ | 28-01-2019 | 32 |
| 5 | ಮುಂಡಗೋಡ | 21-02-2019 | 46 |
| 6 | ಯಲ್ಲಾಪುರ | 28-02-2019 | 28 |
| 7 | ಚಿತ್ತಾಕುಲ, ಕಾರವಾರ | 03-02-2019 | 80 |
| 8 | ಮುಂಡಗೋಡ | 25-02-2019 | 32 |
| 9 | ದಾಂಡೇಲಿ | 27-03-2019 | 28 |
| 10 | ರಾಮನಗರ | 25-03-2019 | 56 |
| 11 | ಕಿರವತ್ತಿ | 27-05-2019 | 47 |
| 12 | ಸಿದ್ದಾಪುರ | 06-04-2019 | 41 |
| 13 | ಪಾಳ | 27-05-2019 | 40 |
| 14 | ಮುಂಡಗೋಡ | 27-06-2019 | 67 |
| 15 | ಜಗಲ್‌ಬೇಟ | 11-06-2019 | 37 |
| 16 | ದಾಂಡೇಲಿ | 26-06-2019 | 36 |
| 17 | ಮಳಗಿ | 28-07-2019 | 62 |
| 18 | ಶಿರಸಿ | 15-07-2019 | 44 |







ಮನುವಿಕಾಸ ಸಂಸ್ಥೆಯು ಜಿಲ್ಲೆಯಲ್ಲಿ ಈಗಾಗಲೇ 400 ಯುವತಿಯರಿಗೆ ಕಂಪ್ಯೂಟರ್, ಬ್ಯೂಟಿಷಿಯನ್ ಮತ್ತು ಹೊಲಿಗೆ ತರಬೇತಿ ನೀಡಿದೆ. ಈ ರೀತಿ ಕೌಶಲ್ಯ ತರಬೇತಿ ಪಡೆದ ಮಹಿಳೆಯರಿಗೂ ಉದ್ಯಮಶೀಲತೆಯ ತರಬೇತಿ ನೀಡಲಾಗುತ್ತಿದೆ.

ಮನುವಿಕಾಸ ಸಂಸ್ಥೆಯು 4600 ಮಹಿಳೆಯರಿಗೆ ಮುಂದಿನ ಒಂದು ವರ್ಷದಲ್ಲಿ ಉದ್ಯಮ ಶೀಲತಾ ತರಬೇತಿ ನೀಡಲು ಯೋಜನೆ ರೂಪಿಸಿ ಕಾರ್ಯರೂಪಕ್ಕೆ ತರಲು ಪ್ರಾರಂಭಿಸಿದೆ.

**ಉದ್ಯಮಶೀಲತಾ ತರಬೇತಿಯಲ್ಲಿ ಈ ಕೆಳಕಂಡ ಅಂಶಗಳ ಮೇಲೆ ತರಬೇತಿ ನೀಡಲಾಗುತ್ತದೆ.**

- ಉದ್ಯಮದ ಪರಿಕಲ್ಪನೆ, ಉದ್ಯಮ ಪ್ರೋತ್ಸಾಹ
- ಸಾಮರ್ಥ್ಯದ ಅರಿವು ಮತ್ತು ಸಶಕ್ತತೆ
- ಉತ್ಪನ್ನದ ವಿವರ, ತಂತ್ರಜ್ಞಾನ
- ಮಾರಾಟದ ಪರಿಕಲ್ಪನೆ, ತಯಾರಿಕೆ ಮತ್ತು ಸಿಬ್ಬಂದಿ ನೇಮಕಾ
- ಹಣಕಾಸು, ಯೋಜನಾ ವರದಿ ಮತ್ತು ಬ್ಯಾಂಕ್ ಸಂಪರ್ಕ
- ಉದ್ಯಮಶೀಲತೆಯಲ್ಲಿ ಮನುವಿಕಾಸ ಸಂಸ್ಥೆಯ ಪಾತ್ರ
- ಯಶಸ್ವಿ ಉದ್ದಿಮೆದಾರರ ಲಕ್ಷಣ




**ಸ್ವ ಸಹಾಯ ಸಂಘದ ಮಹಿಳೆಯರಿಗೆ ಕಿಟ್ ವಿತರಣೆ**




**ಸಿದ್ದಾಪುರ ತಾಲೂಕಿನ ಕೋಲಸಿರ್ಸಿಯ ಹೊಲಿಗೆ ತರಬೇತಿಯನ್ನುದ್ದೇಶಿಸಿ ಮಾತನಾಡುತ್ತಿರುವ ಶ್ರೀ ಗಣಪತಿ ಭಟ್ಟ**






**ಶಿರಸಿ ತಾಲೂಕಿನ ಕಾಯಿಗುಡ್ಡೆ ಹೊಲಿಗೆ ತರಬೇತಿಯ ಫಲಾನುಭವಿಗಳಿಗೆ ಪ್ರಶಸ್ತಿ ಪತ್ರ ವಿತರಣೆ**

## ಸಮರ್ಥ ಉದ್ಯಮಿಗಳು

- ಮಾರುಕಟ್ಟೆಯ ಅಗತ್ಯಗಳನ್ನು ಗಮನಿಸುತ್ತಾರೆ.
- ಉತ್ತಮವಾದ ಉತ್ಪನ್ನ ಅಥವಾ ಸೇವೆ ತಯಾರಿಸಲು ಬಂಡವಾಳವನ್ನು ಹೂಡಿ, ಲಭ್ಯ ಸಂಪನ್ಮೂಲಗಳನ್ನು ಶೇಖರಿಸುತ್ತಾರೆ.
- ಗರಿಷ್ಠ ಲಾಭ ಗಳಿಸಲು ಸಾಧ್ಯವಾಗುವಂತೆ ವಹಿವಾಟು ನಿರ್ವಹಿಸುತ್ತಾರೆ.
- ಯಶ ಸಾಧನೆಗಾಗಿ ಹಲವಾರು ತೊಂದರೆಗಳನ್ನು ಎದುರಿಸುತ್ತಾರೆ.
- ನಿರ್ಧಾರಗಳನ್ನು ಕೈಗೊಳ್ಳುತ್ತಾರೆ ಹಾಗೂ ಅವುಗಳಿಗೆ ತಾವೇ ಜವಾಬ್ದಾರರಾಗಿರುತ್ತಾರೆ.
- ಬೆಳೆಯುವುದಕ್ಕೆ ನಿರಂತರ ಅವಕಾಶ ಹುಡುಕುತ್ತಿರುತ್ತಾರೆ.
- ಮಾರುಕಟ್ಟೆಯಲ್ಲಾಗುವ ಬದಲಾವಣೆಗಳನ್ನು ಮುಂದಾಗಿಯೇ ಅರಿತು, ಅದರಂತೆ ತಮ್ಮ ವ್ಯಾಪಾರವನ್ನು ಅಳವಡಿಸಿಕೊಳ್ಳುತ್ತಾರೆ.
- ಸಮಯ ಅವರಿಗೆ ಒಂದು ಅಮೂಲ್ಯ ಸಂಪತ್ತು.

### ಉದ್ಯಮಶೀಲರಿಗಿರಬೇಕಾದ ಗುಣಲಕ್ಷಣಗಳು

- ಅಭಿವೃದ್ಧಿಪರತೆ
- ಆತ್ಮವಿಶ್ವಾಸ
- ದೀಕ್ಷೆ
- ತೊಂದರೆಗಳನ್ನು ಎದುರಿಸುವ ಮನೋಸ್ಥೈರ್ಯ
- ಅವಕಾಶಗಳಿಗೆ ಕಾಯುವ ತಾಳ್ಮೆ
- ನಾಯಕತ್ವ ಗುಣ
- ವಚನ ಪಾಲನೆ
- ಪರಿಣಾಮಕಾರಿ ತಂತ್ರಗಳ ಬಳಕೆ
- ಗುಣಮಟ್ಟದ ಬಗ್ಗೆ ಕಾಳಜಿ


* ಸಮಸ್ಯೆಗಳ ನಿವಾರಣೆ
* ಸಕಾರಾತ್ಮಕ ಚಿಂತನೆ
* ಮಾಹಿತಿ ಸಂಗ್ರಹ
* ಇತರರ ಮನ ಒಲಿಸುವ ಸಾಮರ್ಥ್ಯ
* ಛಲ
* ಗುರಿ ನಿರ್ಧಾರ
* ವ್ಯವಸ್ಥಿತ ಆಯೋಜನೆ
* ವ್ಯಾಪಾರಿ ಜಾಲ ರಚನೆ



ಸ್ವ ಸಹಾಯ ಸಂಘದ ಮಹಿಳೆಯರಿಗೆ ಉದ್ಯಮಶೀಲತಾ ತರಬೇತಿ



ಒಕ್ಕೂಟ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ಸಂಸ್ಥೆಯ ಸಿಬ್ಬಂದಿ



# ಎಚ್.ಡಿ.ಬಿ. ಫೈನಾನ್ಸಿಯಲ್ ಸರ್ವೀಸಸ್ ಲಿ. ನೆರವಿನಿಂದ ಅಭಿವೃದ್ಧಿ ಹೊಂದಿರುವ ಕೆರೆಗಳು





ನ್ಯಾಸರ್ಗಿ ಕೆರೆ









ಹಳ್ಳಿಕೊಪ್ಪ ಕೆರೆ





## ಮನುವಿಕಾಸ ಸಂಸ್ಥೆಯಿಂದ ಬಡಮಕ್ಕಳಿಗೆ ಪಠ್ಯಪುಸ್ತಕ ವಿತರಣೆ





**ಮನುವಿಕಾಸ ಸಂಸ್ಥೆ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಕೆಲಸ ನಿರ್ವಹಿಸುತ್ತಿದ್ದು ಪ್ರತಿ ತಾಲೂಕಿಗೆ ಸಂಬಂಧಿಸಿದ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ**

| ತಾಲೂಕ | ಸಿಬ್ಬಂದಿಗಳ ಹೆಸರು | ಸಂಪರ್ಕ ಸಂಖ್ಯೆ |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯಸಂಘಗಳ ನಿರ್ವಹಣೆ) | 9449453774 |
| | ವಿನಾಯಕ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9480943073 |
| | ಸಂಜಯ ಅಣ್ವೇಕರ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7259337367 |
| ಸಿದ್ದಾಪುರ | ಅಶ್ವತ್ಥ್ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9901182957 |
| | ಪುನೀತ್ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9686224908 |
| | ಶಶಿಧರ ಕಲ್ಲಿಮಠ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9591556159 |
| ಯಲ್ಲಾಪುರ | ವಿಕಾಸ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9449458369 |
| | ರಾಘವೇಂದ್ರ ಭಟ್ (ಕೆರೆ ಅಭಿವೃದ್ಧಿ ಮತ್ತು ಸ್ವ–ಸಹಾಯ ಸಂಘಗಳ ನಿರ್ವಹಣೆ) | 9448424374 |
| ಮುಂಡಗೋಡ | ಬಸವರಾಜ ರಡ್ಡೇರ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8095311643 |
| | ಗಣಪತಿ ಯಲಿವಾಳ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9980205013 |
| ಕುಮಟಾ | ಮಹೇಶ ನಾಯ್ಕ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8277002758 |
| ಅಂಕೋಲಾ | ರವಿಚಂದ್ರ ವಡ್ಡರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 9686703539 |
| ಕಾರವಾರ | ರಾಬಿಯಾ ಖಾಜಿ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 8904385369 |
| ದಾಂಡೇಲಿ | ನಿರಂಜನ್ ಕದಂ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7259689630 |
| ರಾಮನಗರ | ಅಮಿತ್ ಸೋಲಯೇಕರ್ (ಸ್ವ–ಸಹಾಯ ಸಂಘಗಳ ನಿರ್ವಹಣೆ) | 7026191126 |

## ಮನುವಿಕಾಸ ಸಂಸ್ಥೆಗೆ ಆರ್ಥಿಕ ಸಹಕಾರ ನೀಡುತ್ತಿರುವ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು

Deshpande Foundation

EdelGive Foundation – An Edelweiss Initiative

Anandana – Coca-Cola India Foundation

The GEF Small Grants Programme

GiveIndia – the power to change lives

HDB Financial Services

UNDP India

gef

Voice Foundation

Azim Premji Philanthropic Initiatives

NABARD

Earthwatch Institute

## ಮನುವಿಕಾಸ ಸಂಸ್ಥೆಯ ಸಂಪರ್ಕವಿಳಾಸ


# MANUVIKASA

'MANGESH MAHALAXMI' BUILDING

Rayarpeth, Behind Anjaneya Temple, Vijayanagar,Sirsi Cell: **9845982552**

**www.manuvikasa.blogspot.com**

**http://facebook.com/manuvikasa.karjagi  www.manuvikasaindia.org**

**Email : manuvikasa@gmail.com**


Multi Offset, SIRSI 9449453234